Observing International Children's Year in the State

773 SRI P. RAMDEV (Malleswaram).—Will the Chief Minister be pleased to state

(a) the steps taken to observe the International Children's Year in the State during this year ;

(b) the estimated expenditure to be incurred in this behalf ;

(c) the amount provided by the United Nation Organisation and the Government of India in this behalf ;

(d) the amount distributed to various Institutions and Organisations in the State for observing the International Children Year?

SRI K. H. RANGANATH (Minister for Agricultue and Parlimentary Affairs) on behalf of SRI D. DEVARAJ URS (Chief Minister).—

(a) An attractive rally of children was organised at Kanteerava Stadium on 1st January 1979 in Bangalore City to mark the begining of he International Children's Year, with a view to observe Children Year the following programmes have been chalked out.

(1) 5 fulfledged children welfare (Anganavadi) Schemes were started in 5 Taluks, *i.e.*, Yelburga, Kadur Pavagada, Hassan and Sorab. In this scheme, service regarding Health, Education and Food is being rendered to childern below 6 years of age. In addition to this proper guidence regarding methods to be followed and nutritious food to be taken before and after delivery is being given to the Pregnant Women.

(2) An amount of Rs. 25 per month is being provided to the physically handicapped children in the form of Scholarship. This facility is also made available to all the physically handicapped children studying from 1st Standard to 7th Standard. 2 more certified schools will be opened in addition to the certified schools existing in the State.

Creches will be opend in Primary schools of each Taluks.

In respect of the welfare of women and childern a documentory film of 10 minutes duration has been prepared at the cost of Rs 1.12 lakhs and the same is being shown in all cinema theaters of all the districts in the State. Steps have been taken to collect the amount for State Children s Fund and also at a cost of Rs 5·15 lakhs, a programme for administering Polio, and D.P.T. Vaccine to children has geen drawn up in Bangalore and all other districts of the State. Together with these programmes, the departments of Education and Health and Family Welfare have also taken up several programmes in connection with International Children's Year.

(b) An amount of Rs. 7.44 lakhs has already been spent for this programme. It is proposed to spend an amount of Rs. 3.40 lakhs during 1979–80 for observing the International Children's Year.

(c) Nil

(d) No funds are allotted to any Institutions or Organisations.

ಶ್ರೀ ಪಿ. ರಾಮದೇವ್.—ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆಯನ್ನು ತಾವು ಆಚರಿಸಿದ್ದರಿಂದ ಎಷ್ಟು ಜನ ಮಕ್ಕಳಿಗೆ ಅದರಿಂದ ಉಪಯೋಗವಾಗಿದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್.—ಉತ್ತರದಲ್ಲಿ ಕೊಡಲಾಗಿದೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ತಮ್ಮ ಉತ್ತರದಲ್ಲಿ ಕೊಟ್ಟಿರುವುದು ಏನಿದೆ ಅಂದರೆ ಒಂದು ರ‍್ಯಾಲಿ ನಡೆಸಿದ್ದೀರಿ ಇನ್ನೊಂದು ೫೫ ಸಮಗ್ರ ಬಾಲವಿಕಾಸ (ಅಂಗನವಾಡಿ) ಯೋಜನೆಗಳನ್ನು ೫೫ ತಾಲ್ಲೂಕುಗಳಿಗೆ ವಿಸ್ತರಿಸಿದ್ದೀರಿ, ಅಂಗವಿಕಲ ಮಕ್ಕಳಿಗೆ ತಿಂಗಳಿಗೆ ೨೫ ರೂ. ಗಳಂತೆ ವಿದ್ಯಾರ್ಥಿವೇತನ ಕೊಟ್ಟಿದ್ದೀರಿ ಮತ್ತು ಹತ್ತು ನಿಮಿಷದ ಒಂದು ಚಲನಚಿತ್ರವನ್ನು ತೆಗೆದಿದ್ದೀರಿ. ಇದರಿಂದ ಎಷ್ಟು ಜನ ಮಕ್ಕಳಿಗೆ ಅನುಕೂಲವಾಗಿದೆ? ಇದರ ಪ್ರಯೋಜನವನ್ನು ಎಷ್ಟು ಜನ ಮಕ್ಕಳು ಪಡೆದಿದ್ದಾರೆ?

ಶ್ರೀ ಕೆ. ಹೆಚ್. ರಂಗನಾಥ್.—ಆ ಮಾಹಿತಿ ನನ್ನಲ್ಲಿಲ್ಲ ತಾವು ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸುತ್ತೇನೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಮಾನ್ಯ ಸಚಿವರು, ನನ್ನ ಯಾವ ಪ್ರಶ್ನೆಗಳಿಗೂ ಸರಿಯಾದ ಉತ್ತರವನ್ನೇ ಕೊಡುತ್ತಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್.—''ಈ ವರ್ಷ ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆಯನ್ನು ಈ ರಾಜ್ಯದಲ್ಲಿ ಆಚರಿಸಲು ಕೈಗೊಂಡ ಕ್ರಮಗಳೇನು''? ಎಂದು ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಸರಿಯಾಗಿ ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಪಿ. ರಾಂದೇವ್.—ಹೆಚ್ಚು ಪ್ರಶ್ನೆಗಳನ್ನು ಹಾಕಿದರೆ, ಇದು ಬಹಳ ಉದ್ದವಾಯಿತು ಎಂದು ವಾಪಸು ಕಳುಹಿಸುತ್ತೀರಿ. ಇಲ್ಲಿ ತಾವು ಏನು ಹೇಳಿದ್ದೀರಿ ಎಂದರೆ, ''ವಿದ್ಯಾ ಇಲಾಖೆಯವರು ಮತ್ತು ಆರೋಗ್ಯ ಇಲಾಖೆಯವರು ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆಯ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂದು''ಹೇಳಿದ್ದೀರಿ ೨ ಲಕ್ಷ ರೂಪಾಯಿಗಳ ಯಾವ ಯಾವ ಯೋಜನೆಗಳನ್ನು ಅವರು ಹಾಕಿಕೊಂಡಿದ್ದಾರೆ ಎಂಬುದನ್ನು ಹೇಳುತ್ತೀರಾ?

ಶ್ರೀ ಕೆ. ಹೆಚ್. ರಂಗನಾಥ್.—ವಿದ್ಯಾ ಇಲಾಖೆ ಮತ್ತು ಆರೋಗ್ಯ ಇಲಾಖೆಯವರಿಗೆ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹಾಕಿದರೆ ಅವರು ಉತ್ತರವನ್ನು ಒದಗಿಸುತ್ತಾರೆ.

ಶ್ರೀ ಪಿ. ರಾಂದೇವ್.—ಸ್ವಾಮಿ ತಮ್ಮ ಯೋಜನೆಗಳೆಲ್ಲಾ ಬರೀ ಕಾಗದದ ಯೋಜನೆಗಳಾಗಿವೆ. ತಾವು ಪ್ರಾಮಾಣಿಕವಾಗಿ ಈ ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆಯನ್ನು ಮಾಡಿಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ, ನಾನು ಕೇಳಿದ ಪ್ರಶ್ನೆಗಳೆಲ್ಲಾ. ಅದನ್ನು ನೋಡಬೇಕು ಪ್ರತ್ಯೇಕ ಪ್ರಶ್ನೆ ಕೇಳಿ. ಇತ್ಯಾದಿ ಜವಾಬುಗಳನ್ನು ಹೇಳುತ್ತೀದ್ದೀರಿ. ಇದು ಸರಿಯೇ?

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ನಮ್ಮ ಉತ್ತರದಲ್ಲಿ ಈಗಾಗಲೇ ೭.೪೪ ರೂಪಾಯಿಗಳನ್ನು ಈ ಕಾರ್ಯಕ್ರಮಕ್ಕಾಗಿ ಖರ್ಚು ಮಾಡಿದ್ದೇವೆ, ೧೯೭೯ ೮೦ನೇ ಸಾಲಿಗೆ ಇನ್ನೂ ೩.೪೦ ಲಕ್ಷ ರೂ. ಗಳನ್ನು ಖರ್ಚು ಮಾಡುವವರಿದ್ದೇವೆಂದು ಸ್ಪಷ್ಟವಾಗಿ ಹೇಳಿದ್ದೇವೆ. ಆದರೂ ಮಾನ್ಯ ಸದಸ್ಯರು ಏನೂ ಸಾಧನೆ ಮಾಡಿಲ್ಲ ಎಂದು ಹೇಳುವುದು ಸರಿಯಲ್ಲ.

ಶ್ರೀ ಪಿ ರಾಂದೇವ್.—ಸಭಾಧ್ಯಕ್ಷರೆ ಸರ್ಕಾರವನ್ನು ನಾನು ಕೇಳುತ್ತೇನೆ. ಈ ವರ್ಷದಿಂದ ತಾವು ಪ್ರಾಮಾಣಿಕತನದಿಂದ ನಡೆಮುಕೊಂಡರೆ ಮಕ್ಕಳ ಬಿಕ್ಷಾಟನೆ ವತ್ತು ಮಕ್ಕಳ ಚೈಲ್ಡ್ ಲೆಬರ್ ಎಂದು ಏನು ಇರುತ್ತದೆ ಅದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಕ್ಕಳ ಬಿಕ್ಷಾಟನೆ ಮತ್ತು ದೊಡ್ಡವರ ಬಿಕ್ಷಾಟನೆಯನ್ನು ತಪ್ಪಿಸುವ ಜವಾಬ್ದಾರಿಯನ್ನು ಮಾನ್ಯ ತಾವಣ್ಣನವರಿಗೆ ವಹಿಸಿದ್ದೇವೆ. ಮತ್ತೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಹೇಳಿದರು ಚೈಲ್ಡ್ ಲೇಬರ್ ಎಂದು. ಅದಕ್ಕೆ ಕಾನೂನು ಇದೆ. ಹದಿನಾಲ್ಕು ವರ್ಷಕ್ಕಿಂತ ಕೆಳಗೆ ಇರತಕ್ಕಂಥ ಮಕ್ಕಳನ್ನು ಕೆಲಸಕ್ಕೆ ತೊಡಗಿಸಬಾರದೆಂದು ಕಾನೂನು ಇರುತ್ತದೆ. ಕಾನೂನು ಅಪ್ಪಿರಮಟ್ಟಿಗೆ ಉತ್ತಮಪಾಗಿ ಜಾರಿಗೆ ಬಂದಿಲ್ಲವೆನ್ನುವ ಮಾತನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಪಿ. ರಾಂದೇವ್.—ತಾವು ಬಾಲ ಅಪರಾಧಿಗಳನ್ನು ಜೈಲಿಗೆ ಕಳುಹಿಸಿರುತ್ತೀರಿ, ಈ ಮಕ್ಕಳ ವರ್ಷದಲ್ಲಾದರೂ ಅವರನ್ನು ಬಂದನದಿಂದ ವಿಮುಕ್ತ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ನಮ್ಮ ರಾಜ್ಯದಲ್ಲಿ ಬಾಲ ಅಪರಾಧಗಳನ್ನು ತಡೆಗಟ್ಟಬೇಕೆನ್ನುವ ಉದ್ದೇಶದಿಂದ ಒಂದು ವರ್ಷದಿಂದ ಕೆಲಸ ನಡೆಯುತ್ತದೆ. ಇದಕ್ಕಾಗಿ ಮಾನ್ಯ ರೆವಿನ್ಯೂ ಸಚಿವರು ಸೆಂಟ್ರಲ್ ಜೈಲಿನಲ್ಲಿ ಸಣ್ಣ ಮಕ್ಕಳು ಯಾರೂ ಅಪರಾಧಕ್ಕೊಳಗಾಗಿ ಬಂದಿರುತ್ತಾರೋ ಅವರಿಗೆ ಕೈಗಾರಿಕೆಗಳನ್ನು ಕಲಿಸುವ ವಿಧಾನವನ್ನು ಪ್ರಾಡಿರುತ್ತಾರೆ. ಅದನ್ನು ಇನ್ನೂ ಉತ್ತಮಪಡಿಸಬೇಕು ಮತ್ತು ಬಾಲ ಅಪರಾಧಿಗಳನ್ನು ತಪ್ಪಿಸಬೇಕೆಂದು ಸರ್ಕಾರದ ಉದ್ದೇಶವಾಗಿರುತ್ತದೆ. ಅದರ ಹೊಣೆಯನ್ನು ಸರ್ಕಾರದವರು ಹೊತ್ತರೆ ಮಾತ್ರ ಸಾಲದು, ಸಮಾಜವೂ ಕೂಡ ಅದರ ಹೊಣೆಯನ್ನು ಹೊರಬೇಕೆಂದು ಹೇಳುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಅಂತರರಾಷ್ಟ್ರೀಯ ಮಕ್ಕಳ ವರ್ಷ ಕೊನೆಯಾಗಿ ಬರುತ್ತಿದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರೈಮರಿ ಶಾಲೆಗಳಿಗೆ ಸೇರಿಸಿದಂತೆ ಕ್ರೆಷಷ್‌ಗಳನ್ನು ತೆರೆಯುವುದಾಗಿ ತಪ್ಪು ಉತ್ತರದಲ್ಲಿ ಕೊಟ್ಟಿದ್ದೀರಿ. ಎಷ್ಟು ತಾಲ್ಲೂಕುಗಳಲ್ಲಿ ಕ್ರಷ್‌ಷ್‌ಗಳನ್ನು ಈ ವರ್ಷದಲ್ಲಿ ಸರ್ಕಾರದವರು ಶುರು ಮಾಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್.—ನನಗೆ ತಿಳಿದರೀತಿಯಲ್ಲಿ Creches will be opened in Primary schools of each Taluk.

ಶ್ರೀಮತಿ ನಾಗಮ್ಮ ಕೇಶವ ಮೂರ್ತಿ.—ನನ್ನ ತಾಲ್ಲೂಕಿನಲ್ಲಿ ಯಾವ ಕಡೆಯೂ ಕ್ರಷಷ್ ಶುರು ಮಾಡಿಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ರೆಷಷ್‌ಗಳನ್ನು ತೆರೆಯುವುದಾಗಿದೆಂದು ಹೇಳಿರುತ್ತೇವೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಪ್ರತಿಯೊಂದು ತಾಲ್ಲೂಕಿನಲ್ಲಿ ಕ್ರಷಷ್ ತೆರೆದಿರುತ್ತೇವೆಂದು ಹೇಳಿರುತ್ತೀರಿ, ಇಲ್ಲಿಯವರೆಗೆ ಎಷ್ಟು ಕ್ರಷಷ್ ತೆರೆದಿರುತ್ತೀರಿ?

ಶ್ರೀ ಕೆ. ಹೆಚ್. ರಂಗನಾಥ್.—ಇಲ್ಲಿಯವರೆಗೆ ೬೭೧ ತೆರೆದಿದ್ದೇವೆ. ಉತ್ತರದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಕ್ರೆಷಷ್‌ಗಳನ್ನು ತೆರೆಯಲಾಗುವುದು ಎಂದು ಕೊಟಿ ರಾತೆ ೇಪೆಟೋ ಹೊರತು ಎಲ್ಲ ತಾಲ್ಲೂಕುಗಳಲ್ಲಿಯೂ ತೆರೆದಿರುತ್ತೇವೆಂದು ಹೇಳಿಲ್ಲ. ಈಗ ೬೭೧ ತಾಲ್ಲೂಕುಗಳಲ್ಲಿ ತೆಗೆದಿರುತ್ತದೆ. ಇನ್ನೂ ಕೆಲವು ತಾಲ್ಲೂಕುಗಳಿಗೆ ಅಗತ್ಯವಿರಬಹುದು. ಸರ್ಕಾರ ಈ ವರ್ಷ ೧೭೫ ತಾಲ್ಲೂಕುಗಳಲ್ಲಿ ತೆರೆಯಲು ಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

Fixing a Ceiling Limit of Land for a Hindu Undivided Family

971. SRI V. V. PATTAR (Jamkhandi).—Will the Minister for Revenue be pleased to state :—

(a) whether the Government is aware that according to the present law (Land Reforms Act) practically there is no limitation for a Hindu undivided family's holding of land and that the holding